ಶ್ರೀ ಬಿ. ಬಸವಲಿಂಗಪ್ಪ.—ನನ್ನ ಫೈಲಿನಲ್ಲಿ ಆ ವಿಷಯ ಏನು ಇಲ್ಲ ತಾವು ಬೇರೆ ಪ್ರಶ್ನೇ ಇದರೆ ಹೇಳುತ್ತೇನೆ. ಸಬ್‌ಲೆಟ್ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಎಷ್ಟು ಜನ ಏನು ಮಾಹಿತಿ ಇಲ್ಲ.

SRI M. S. KRISHNAN.—The answer is very clear. It says 'Such action was taken to detect the irregularities as the fact of some Government Servants who were allotted houses on rent sub-letting them and allowing persons not belonging to their family occupying them had been brought to the notice of the Government.' So we expected the Hon'ble Minister to be ready with the information as to how many people have sub-letted. That is the question put and the answer given. The Hon'ble Minister now says that he is not ready with that information.

ಅಧ್ಯಕ್ಷರು.—ನನ್ನ ಹತ್ತಿರ ಇನ್‌ಫರೇಷನ್ ಇಲ್ಲ ಎಂದು ಹೇಳಲಿಲ್ಲ, ಅದು ಫೈಲಿನಲ್ಲಿ ಇಲ್ಲ ಎಂದು ಹೇಳಿದರು. Question Hour is over.

CALLING ATTENTION TO MATTER OF URGENT PUBLIC IMPORTANCE

Re: Stoppage of Loan by the Mysore Housing Board

SHRI T. R. SHAMANNA (Fort).—I call the attention of the Minister for Municipal Administratsion in respect of stoppage of loan by the Housing Board even in respect of those to whom loans have been sanctioned and documents have been registered and also keeping under suspension many sanctioned loans.

SHRI B. BASAVALINGAPPA (Minister for Muncipal Administration).—Sir, I make the following Statement.

In Government order No. DPC. 2. DLH. 72 dated 23-6-73 the system of granting cash loan to individuals under Low Income Group Housing and Middle Group Housing Schemes by the Mysore Housing Board was discontinued with effect from 1-4-1973.

2. Sri T. R. Shamanna, M.L.A., has raised issue of importance under Rule 63 of Rules of procedure, stating that the Mysore Housing Board has stopped disbursing of cash loans even in respect of those to whom loans have been sanctioned and documents have been registered and it has also kept under suspension, many sanctioned cases. He has also alleged that, as a result of this, many site owners who have taken up the house construction on the reliance of the sanction of loan, are put to considerable difficulty and inconvenience.

3. The circumstances under which these cash loans by Mysore Housing Board were discontinued are.

(SRI B. BASAVALINGAPPA)

(i) The Housing Board is expected to play a crucial role in the promotion of rural and Urban Housing. It should raise resources from the Institutions like L.I.C., HUDCO., etc and organise its activities on a planned basis. There is no need for a statutory body to pass on cash loans. This function could as well be done by the Coop. Housing Building Societies and other Apex Corporation.

(ii) Under the Cash loan scheme, the money gets locked up for a period of 10 to 15 years even though it earns interest. Except to the extent of repayments due each year, there is no ploughing back of the capital on further constructions. On the other hand, under the scheme of construction of houses by the Housing Board itself, there is a down payment of 20% of the price including the cost of the site.

4. It has come to the notice of Government through the reports forwarded by the Chairman, Mysore Housing Board and also a few representations of individuals made to Government that, there are cases where loans have been sanctioned by the Board and the parties have also executed the mortgage deeds etc. but in whose cases the Board has not disbursed the instalments from 1-4-1973. The question of permitting the Board to issue cash loans in such cases is under active consideration of Government. Such of those cases where the parties executed necessary documents prior to 31-3-1973 have been sanctioned cash loans.

10-00 A. M.

ಶ್ರೀ ಟ. ಆರ್. ಶಾಮಣ್ಣ.—ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಒಂದು ವರದಿಯಲ್ಲಿ ಇ ಎಪ್ರಿಲ್ ೧೯೭೩ಕ್ಕೆ ಮೊದಲು ಯಾರಿಗೆ ಕೇಸಸ್ ಸ್ಯಾಂಕ್ಷನ್ ಆಗಿದೆಯೋ ಅಂಥವರ ಬಗ್ಗೆ ಅನ್ವಯಿಸುವುದಿ ಎಂದು ಹೇಳಿದ್ದಾರೆ. ನನ್ನ ತಮ್ಮ ಮಿಲಿಟರಿಯಲ್ಲಿ ಕೆಲಸಮಾಡುವವನು ಮೂರು ತಿಂಗಳು ರಜಾ ತೆಗೆ ಕೊಂಡು ಬಂದು ಇಲ್ಲಿ ಕೂತು, ಮನೆ ಕಟ್ಟಿ, ಈಗ ಆ ಮನೆಹಾಳು ಮಾಡಿಕೊಂಡು ಬಹಳ ದುಃಖಿತನಾಗಿ ತಕ್ಕ ಸಂದರ್ಭ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ? ಇಂಥಾದ್ದು ನೂರಾರು ಸಂದರ್ಭಗಳ ಲೋನ್ ಸ್ಯಾಂಕ್ಷನ್ ಆಗಿ ಪತ್ರ ರಿಜಿಸ್ಟರಾಗಿ ಸಾಲ ಕೊಡದೇ ಇರುವುದು ಅನ್ಯಾಯವಲ್ಲವೇ ? ನನ್ನ ಮಿತ್ರರು ಹೇಳಿದಹಾಗೆ, ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂದು ಮಂತ್ರಿಗಳ ಮತ್ತು ಹೌಸಿಂಗ್ ಬೋರ್ಡ್ ಛೇರ್ಮನ್‌ರ ತಿಕ್ಕಾಟದಲ್ಲಿ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹೌಸಿಂಗ್ ಬೋರ್ಡ್ ಕಟ್ಟಿದಂಥ ನೂರಾರು ಮನೆಗಳು ಸೋರಿ ಹೋಗಿರುವುದು, ಮಹಾಲಕ್ಷ್ಮಿ ಎಕ್ಸ್‌ಟೆನ್‌ಷನ್‌ನಲ್ಲಿ ಅನೇಕ ಮನೆಗಳು ಉರುಳಿ ಹೋಗಿರುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೇ ? ಕೋ-ಆಪರೇಟೀವ್ ಸೊಸೈಟಿಗಳ ಮಾಖಾಂತರ ಕ್ಯಾಪ್‌ಲೋನ್ ಸರಿಯಾಗಿ ದೊರಯುವಂತೆ ಇರುವ ಅಂತ ಗೊತ್ತಿಲ್ಲವೇ ? ಮಂತ್ರಿಗಳು ತಮ್ಮ ಸರ್ವಾಧಿಕಾರದ ಮನೋಭಾವ ಬಿಟ್ಟು ಜನಗಳ ಬಗ್ಗೆ ನ್ಯಾಯದಿಂದ ನಡೆದುಕೊಳ್ಳುವುದಕ್ಕೆ ಭರವಸೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ಗಮನಕ್ಕೆ ಯಾವ ಯಾವುದೂ ಬಂದಿದೆಯೋ ಆ ನನ್ನ ಗಮನಕ್ಕೆ ಬಂದಿಲ್ಲ. ಆದರ ಬಗ್ಗೆ ಹೇಳಂವುದು ಅನಾವಶ್ಯಕ. ನಾನು ಆಗಲೇ ಹೇಳಿದ್ದೇನೆ, ೩೧-೩-೧೯೭೩ರ ತಾರೀಖಿನ ಹಿಂದೆ ಯಾರು ಯಾರು ರಿಜಿಸ್ಟರ್ ಮಾಡಿಕೊಂಡಿದ್ದರೂ ಅವರೆಲ್ಲರಿಗೂ ಕೂಡ

ಹಣ ಒದಗಿಸುತ್ತೇವೆಂದು ಜನಗಳಿಗೆ ತೊಂದರೆಯಾಗಿದೆಯೆಂದು ತಾವು ಹೇಳಿದಿರಿ ಅಂಥ ಜನ ಯಾರು ಎನ್ನುವುದು ಈಗ ಸರ್ಕಾರದ ಮುಂದಿರುವ ಪ್ರಶ್ನೆ. ಯಾವ ಜನರಿಗೆ ಅನ್ಯಾಯವಾಗಿದೆಯೋ ಅಂಥ ಜನರಿಗೆ ಅನುಕೂಲ ಆಗಬೇಕು ಎನ್ನುವ ದೃಷ್ಟಿಯಿಂದಲೇ ಈಗ ನಾವು ಕೆಲಸಮಾಡುತ್ತಿರುವುದು. ಸಮಾಜವಾದೀ ಸಮಾಜ ಸೃಷ್ಟಿಯಾಗಬೇಕಾಗಿದೆ. ಇದನ್ನು ಹಲವಾರು ವಿಧಗಳಿಂದ ಮಾಡಬೇಕಾಗುತ್ತದೆ. ನಿಮ್ಮ ದೃಷ್ಟಿಯಲ್ಲಿ ಯಾವ ಜನ ಇದ್ದು, ಅವರಿಗೆ ಅನ್ಯಾಯವಾಗಿದೆಯೆಂದು ಹೇಳುತ್ತೀರಿ, ಆ ಜನಗಳು ಬಹಳ ಸಂಪತ್ತಿನಿಂದ ಕೂಡಿ ಬಹಳ ವರ್ಷಗಳಿಂದ ಸುಖವಾಗಿ ಜೀವನ ಮಾಡಿಕೊಂಡು ಬಂದಿದ್ದಾರೆ. ಅಂತಹ ಜನಗಳು ಸ್ವಲ್ಪ ದಿವಸ ಇರಲಿ. ಸಮಾಜವಾದೀ ಸಮಾಜವನ್ನು ಸೃಷ್ಟಿಮಾಡುವುದಕ್ಕೆ ಈಗ ಕಾರ್ಯಕ್ರಮ ಹಾಕಿಕೆ ಇಳ್ಳಬೇಕಾಗಿದೆ. ಅದರ ಬಗ್ಗೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ. ಕೆಲವರಿಗೆ ಇದರಿಂದ ಅನ್ಯಾಯವಾಗುತ್ತದೆ ಎಂದು ತಿಳಿದುಕೊಂಡಿರುತ್ತಾರೆ. ಬಹಳ ದಿವಸಗಳಿಂದ ಸುಖವಾಗಿದ್ದ ಜನಕ್ಕೆ ಆಕಾಶ ಕೆಳಗೆ ಬಿದ್ದು ಹೋಯಿತು, ಭೂಮಿ ಬಿರಿಕು ಬಿಟ್ಟಹಾಗೆ ಆಗಿದೆ. ಅವರು ಒಂದು ಕಡೆ ಇರಲಿ. ಈಗ ಬಡವರಿಗೆ ಏನು ನ್ಯಾಯ ಸಿಗಬೇಕೋ ಅದನ್ನು ಮಾಡೋಣ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಮ್ಮ ಹೇಳಿಕೆಯಲ್ಲಿ ಹೇಳಿದ್ದೀರಿ. ೨೩-೬-೧೯೭೩ ರಂದು ಸರ್ಕಾರ ಆಜ್ಞೆ ಹೊರಡಿಸಿ ೧೪-೪-೧೯೭೩ ರ ಮೇಲೆ ನಗದು ಸಾಲ ಕೊಡಕೂಡದು ಎಂದು ಅಪ್ಪಣೆ ಮಾಡಿದ್ದೀರಿ. ಈ ವಿಧ್ಯ ಅರ್ಜಿ ಕರೆದಿರುವುದು, ಸಾಲ ಸೋಲ ಮಾಡಿ ಅಧಿಕಾರಿಗಳ ಹತ್ತಿರ ರಿಕಾರ್ಡ್ ಬಿಲ್ಡ್ ಅಪ್ ಆಗಿ, ರಿಜಿಸ್ಟರಾಗಿರುವುದಕ್ಕೆ ಸಾಲ ಕೇಳಿರುವುದು ತಪ್ಪೆ ? ಸರ್ಕಾರದ ಆಜ್ಞೆ, ಆದೇಶ ತಪ್ಪೇ ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ.—ನಾನಾಗಲೇ ಹೇಳಿದ್ದೇನೆ. ೩೧-೩-೧೯೭೩ನೇ ತಾರೀಖು ಹಿಂದೆ ಯಾರು ಯಾರಿಗೆ ಕೊಡುತ್ತೇವೆ ಪಿಂಬಾದನ್ನು ಹೇಳಿದ್ದಾರೆ, ಅವರೆಲ್ಲರ ಬೇಡಿಕೆಗಳನ್ನು ಮನ್ನಣೆ ಮಾಡುತ್ತೇವೆ, ಹಣ ಕೊಡುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇನ್ನೊಂದು ಸಾರಿ ನನ್ನ ಪ್ರಶ್ನೆಯನ್ನು ಮನವರಿಕೆ ಮಾಡಿಕೊಡುತ್ತೇನೆ. ೧-೪-೧೯೭೩ ರಿಂದ ಹೌಸಿಂಗ್ ಬೋರ್ಡ್‌ನವರು ನಗದು ಹಣ ಕೊಡಬೇಡಿ ಎಂದು ಆರ್ಡರ್ ಹೊರಡಿಸಿರುವುದು ೨೩-೬-೧೯೭೩ ರಲ್ಲಿ. ಒಂದು ತಿಂಗಳು ೨೨ ದಿವಸದ ಹಿಂದಿನಿಂದ ಆಜ್ಞೆ ಅನ್ವಯಿಸುವ ಹಾಗೆ ಹೊರಡಿಸಿದ್ದೀರಿ. ಹೌಸಿಂಗ್ ಬೋರ್ಡ್ ಆಶ್ರಯದಲ್ಲಿ ಸಾಲ ಕೇಳಿದರೆ ಸಿಗುತ್ತದೆ ಎಂದು ನಂಬಿಕೆ ಇದ್ದ ಬಡವರು, ಅನೇಕ ಹೆಣ್ಣು ಮಕ್ಕಳು, ಒಡವೆ, ವಸ್ತು ಅಡ ಇಟ್ಟು ಸೈಟಿನಲ್ಲಿ ಮೆಟೀರಿಯಲ್ ಕಲೆಕ್ಟ್ ಮಾಡಿರ ತ್ತಾರೆ. ಈ ಆದೇಶದ ಬಗ್ಗೆ ಅನೇಕರು ಕೋರ್ಟಿಗೆ ಹೋಗಿದ್ದಾರೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಈ ತಾರೀಖಿನವರೆಗೆ ಅಲ್ಲಿರೆತಕ್ಕ ಎಲ್ಲಾ ರಿಕಾರ್ಡ್‌ಗಳಿಗೂ ತಾವು ಸಾಲ ಕೊಡಿಸುವಂಥ ವ್ಯವಸ್ಥೆ ಮಾಡಿ. ಸಮಾಜದಲ್ಲಿ ಏರುಪೇರುಗಳಿವೆ, ತಾವು ಏನು ಬಹಳ ವರ್ಷಗಳಿಂದ ಸುಖ ಸಂತೋಷ ಅನುಭವಿಸಿದಂಥ ಜನ ಸ್ವಲ್ಪ ದಿವಸ ಹಾಗೇ ಇರಲಿ ಎಂದು ಅಪ್ಪಣೆಕೊಡಿಸಿದಿರಿ ಅವರನ್ನು ಬಿಟ್ಟು ಉಳಿದ ಜನಕ್ಕೆ ಎಷ್ಟು ದಿವಸಕ್ಕೆ ಅನುಕೂಲ ಮಾಡುತ್ತೇವೆಂದು ಹೇಳುತ್ತೀರಾ ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ,—ಏಪ್ರಿಲ್ ಒಂದರಿಂದ ೨೩-೬-೧೯೭೩ನೇ ತಾರೀಖಿನವರೆಗೆ ಅಂದರೆ ಒಂದು ತಿಂಗಳು ಚಿಲ್ಲರೆ ಅವಧಿಯಲ್ಲಿ ಏನು ಮಾಡುತ್ತಾರೆಂದು ಪ್ರಶ್ನೆ ಕೇಳಿದ್ದಾರೆ. ಹಿಂದೆಕೂಡ ಸರ್ಕಾರಿ ಆಜ್ಞೆ ಕೊಡುವುದಿಲ್ಲ ಎಂದು ಆಗಿದೆ. ಆಮೇಲೆ ಆ ನೀತಿಯನ್ನು ಸ್ಪಷ್ಟಪಡಿಸಿದ್ದೇವೆ. ಸರ್ಕಾರದ ನೀತಿಯನ್ನು ಸ್ಪಷ್ಟಪಡಿಸಿದ್ದೇವೆ. ಅದರ ಹಿಂದೆ ಕೂಡ ಸರ್ಕಾರಿ ಆರ್ಡರ್ ಹೊರಡಿಸಿ ೩೧-೩-೧೯೭೩ ರ ಹಿಂದೆ ಯಾರು ಯಾರು ಸಾಲ ಕೇಳಿರುತ್ತಾರೆ ಅವರೆಲ್ಲರಿಗೂ ಕೊಡುತ್ತೇವೆಂದು ಹೇಳಿದ್ದೇವೆ. ಅದರ ಮೇಲೆ ಹೆಚ್ಚಿಗೆ ಹೇಳಂವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದು ಇತೀ ಕರ್ನಾಟಕದ ಪ್ರಶ್ನೆ. ಬಹಳ ಜನರಿಗೆ ತೊಂದರೆಯಾಗಿದೆ. ಒಂದೇ ವಿಚಾರದಲ್ಲಿ ಸರ್ಕಾರ ಹಲವಾರು ಆಜ್ಞೆಗಳನ್ನು ಹಿಂದೆ ಮಾಡಿದೆ ಎಂದು ಹೇಳಿದಿರಿ. ಹಿಂದೆ ಮಾಡಿರುವುದನ್ನು ಸ್ಪಷ್ಟಪಡಿಸುವುದಕ್ಕೆ ಇದನ್ನು ಮಾಡಿದ್ದೇವೆಂದು ಹೇಳಿದ್ದೀರಿ. ನಾನು ತಿಳಿಯಾಗಿ ಕೇಳುತ್ತೇನೆ. ಮಧ್ಯವರ್ತಿ ಕಾಲದಲ್ಲಿ ಆಗಿರತಕ್ಕ ಎಲ್ಲಾ ರಿಕಾರ್ಡ್‌ಗಳಿಗೂ ಮಂಜೂರುಮಾಡಿ.

ಆಮೇಲೆ ತೀವ್ರತರವಾಗಿ, ಪ್ರಗತಿಪರವಾಗಿ, ಎಂದು ಹೇಳಿದ್ದೀರಿ, ಅದನ್ನು ಯಾವಾಗ ಮಾಡುತ್ತೀರೆಂದು ಹೇಳಲಿಲ್ಲ. ಅದು ಕೇಳುವುದಕ್ಕೆ ಇಂಪಾಗಿದೆ. ಸರ್ಕಾರದ ಲೋಪವಾಗಿರುವ ಬಗ್ಗೆ ಜನರಿಗೆ ಸಿಕ್ಷೆ ಮಾಡ ಬೇಡಿ. ಸಾವಧಾನವಾಗಿ ಅಧ್ಯಕ್ಷರ ಮುಖಾಂತರ ದೇಶಕ್ಕೆ ಒಂದು ಮಾತು ಹೇಳಿ. ೩೧-೩-೧೯೭೩ ರಲ್ಲಿ ೧-೪-೧೯೭೩ ರಿಂದ ಲೋನ್ ಕೊಡಬೇಡಿ ಎಂದು ಆಜ್ಞೆ ಹೊರಡಿಸಿದ್ದೀರಿ. ಈ ಮಧ್ಯವರ್ತಿ ಪಿರೀಡ್‌ನಲ್ಲಿ ಎಲ್ಲಾ ರಿಕಾರ್ಡ್‌ಗಳಿಗೂ ಸಾಲ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಇದರ ಬಗ್ಗೆ ಆಗಲೇ ಹೇಳಿದ್ದೇನೆ. ಹೌಸಿಂಗ್‌ಬೋರ್ಡ್ ಬಗ್ಗೆ ಸರ್ಕಾರದ ನೀತಿಗೆ ಅನುಗುಣವಾಗಿ ಪುನಃ ಏನು ಒಂದು ವ್ಯವಸ್ಥೆಯನ್ನು ನಿರೂಪಿಸುತ್ತೇವೋ ಆಗ ಇವೆಲ್ಲವನ್ನೂ ಪರಿಶೀಲನೆಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಇದರಲ್ಲಿರುವ ಮಾನ್ಯ ಎಚ್. ಟಿ. ಕೃಷ್ಣಪ್ಪನವರ ಎರಡನೇ ಗಮನ ಸೆಳೆಯುವ ಸೂಚನೆಯನ್ನು ಸೋಮವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಆಗಲಿ.

Re : Death of a boy in Sandur Palace

ಶ್ರೀ ಕಾಗೋಡು ತಿಮ್ಮಪ್ಪ.—ಸೊಂಡೂರಿನ ಅರಮನೆಯಲ್ಲಿ ಒಬ್ಬ ಹುಡುಗನ ಕೊಲೆಯಾಗಿದೆ. ಅದರ ಬಗ್ಗೆ ಕಾಲ್ ಅಟೆನ್‌ಷನ್ ನೋಟೀಸು ಕಳುಹಿಸಿದ್ದೇನೆ. ಆ ಬಗ್ಗೆ ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು.—ಅದನ್ನು ನೋಡುತ್ತೇನೆ.

Re : Stoppage of drought Relief work at Gulbarga

ಶ್ರೀ ಬಾಪೂಗೌಡ ರಾಯಪ್ಪ.—ಗುಲ್ಬರ್ಗಾದಲ್ಲಿ ಈಗ ಒಂದು ತಿಂಗಳಿಂದಲೂ ಬರಗಾಲ ಕೆಲಸ ನಿಂತು ಹೋಗಿದೆ, ಏನೂ ಕೆಲಸ ನಡೆಯುತ್ತಾ ಇಲ್ಲ. ಈ ಬಗ್ಗೆ ನಾನು ಒಂದು ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ಬರಗಾಲ ಪ್ರದೇಶಕ್ಕೆ ೬೩ ಕೋಟಿ ರೂಪಾಯಿ ಖರ್ಚು ಮಾಡಿದ್ದರೂ ಕೂಡ ಇನ್ನೂ ಸಮಾಧಾನವಿಲ್ಲ ಎಂದರೆ ಹೇಗೆ ?

ಶ್ರೀ ಬಾಪೂಗೌಡ ರಾಯಪ್ಪ.—ನಾನು ಹೇಳುವ ವಿಷಯ ಏನೆಂದರೆ ಅಲ್ಲಿ ಸುಮಾರು ಒಂದು ಸಾವಿರ ಮುಂದಿ ಡಿಪ್ಲೊಮಾ ಹೋಲ್ಡರ್ಸ್ ಮತ್ತು ಇಂಜಿನಿಯರ್ಸ್ ನಿರುದ್ಯೋಗಿಗಳಾಗಿದ್ದಾರೆ. ಅಲ್ಲಿ ಮೇಜರ್ ಇರ್ರಿಗೇಷನ್ ಕೆಲಸ ನಡೆಯುತ್ತಾ ಇಲ್ಲ ಎಂದು ನನಗೆ ಟೆಲಿಗ್ರಾಂ ಬಂದಿದೆ.

ಅಧ್ಯಕ್ಷರು.—ಅದನ್ನು ಕಾಲ್ ಅಟೆನ್‌ಷನ್ ನೋಟೀಸ್ ಆಗಿ ಪರಿವರ್ತನೆ ಮಾಡಿದ್ದೇನೆ.

ಶ್ರೀ ಬಾಪೂಗೌಡ ರಾಯಪ್ಪ.—ಅಧ್ಯಕ್ಷರೇ, ಕಂದಾಯ ಮಂತ್ರಿಗಳು ಈ ಬಗ್ಗೆ ಉತ್ತರ ಹೇಳಲು ತಯಾರಿದ್ದಾರೆ. ದಯವಿಟ್ಟು ಉತ್ತರ ಕೊಡಿಸಿಕೊಡಬೇಕು.

ಅಧ್ಯಕ್ಷರು. ಹಾಗಾಗುವುದಿಲ್ಲ. ಆ ವಿಷಯ ಬಂದಾಗ ನೋಡುತ್ತೇನೆ.

Re : Sale of three Buildings belonging to Mysore Palace

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ಈಗಾಗಲೇ ಈ ಬಗ್ಗೆ ಮನವರಿಕೆ ಮಾಡಿಕೊಂಡಿದ್ದೇನೆ. ಅದು ಏನೆಂದರೆ ಮೈಸೂರು ಅರಮನೆಗೆ ಸೇರಿದಂಥ ೩ ಅರಮನೆಗಳ ಕಟ್ಟಡಗಳನ್ನು ಮಾರಾಟ ಮಾಡುವುದರ ವಿಷಯದ ಬಗ್ಗೆ ಹೇಳಬೇಕಾಗಿದೆ.

ಅಧ್ಯಕ್ಷರು.—ಆ ಅಲ್ಪಕಾಲಾವಧಿ ಪ್ರಶ್ನೆಯನ್ನು ಸರಕಾರಕ್ಕೆ ಕಳುಹಿಸಿದ್ದೇನೆ. ಅದಕ್ಕೆ ಉತ್ತರ ಬಂದ ತಕ್ಷಣ ಅಜೆಂಡಾದಲ್ಲಿ ಹಾಕಿಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ನಾನು ಕೇಳಿರತಕಂಥ ಪ್ರಶ್ನೆಗಳೆಲ್ಲಾ ಈಗಿನ ಪ್ರಶ್ನೆಗಳಿಂದ ಮೊದಲದೇಯದಾಗಿರಬಹುದು ಅಥವಾ ಎರಡದೆಯದಾಗಿರಬಹುದು. ಆದಕ್ಕೆ ಉತ್ತರ ಬರುವುದು ಇಷ್ಟು ನಿಧಾನವಾದರೆ ಹೇಗೆ ? ಈ ಪ್ರಶ್ನೆ ಬಹಳ ಪ್ರಾಮುಖ್ಯವಾದುದು.

ಅಧ್ಯಕ್ಷರು.—ಹಾಗಾದರೆ ಈಗ ಹಾಕಿರತಕ್ಕಂಥ ಪ್ರಶ್ನೆಗಳು ಪ್ರಾಮುಖ್ಯವಾದುವು ಅಲ್ಲವೆ ? ತಾವು ಹೇಳಿರುವುದನ್ನು ನೋಡಿದರೆ ನೀವು ಹೇಳಿದುದು ಒಂದು ಮಾತ್ರ ಇಂಪಾರ್ಟೆಂಟ್ಸ್ ಇದೆ ಎಂದು ಮನವರಿಕೆಯಾಗುತ್ತದೆ.